**<u>ಅಸಲು ದಾವಾ ಸಂಖ್ಯೆ - 199/2019</u>** **ಪಿ.ಡಬ್ಲ್ಯೂ:-1**

ದಿನಾಂಕಃ **14-07-2023** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಂದುವರೆದ ಪಾಟೀ ಸವಾಲು :- ಪ್ರತಿವಾದಿಗಳ ಪರ ವಕೀಲರಿಂದ :-</u>**

ವಾದ ಪತ್ರದ ಬಗ್ಗೆ ಹಾಗೂ ನ್ಯಾಯಾಲಯಕ್ಕೆ ಸಲ್ಲಿಸಿರುವ ದಾಖಲೆಗಳ ಬಗ್ಗೆ ನನಗೆ ಪೂರ್ಣ ಮಾಹಿತಿ ಇದೆ. ದಾವಾ ಸ್ವತ್ತುಗಳ ಚೆಕ್ಕು ಬಂಧಿಯನ್ನು ನನಗೆ ಹೇಳಲಾಗುವುದಿಲ್ಲ. ದಾವಾ ಅನುಸೂಚಿ 2 ನೇ ಸ್ವತ್ತಿನಲ್ಲಿ 2 ಎಕರೆ 20 ಗುಂಟೆ ವಿಸ್ತೀರ್ಣದಲ್ಲಿ ಸುಮಾರು 54 ವರ್ಷಗಳಿಂದ ಸರ್ಕಾರಿ ಶಾಲೆ ಇರುವ ಬಗ್ಗೆ ನನಗೆ ಮಾಹಿತಿ ಇಲ್ಲ. ದಾವಾ ಸ್ವತ್ತಿನ ಉತ್ತರಕ್ಕೆ ರಸ್ತೆ ಮತ್ತು ದಕ್ಷಿಣಕ್ಕೆ 30 ಗುಂಟೆ ಭೂ ಸ್ವಾದೀನವಾಗಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಭೂ ಸ್ವಾಧೀನವಾದ ಜಾಗದಲ್ಲಿ ಮನೆಗಳನ್ನು ನಿರ್ಮಿಸಿಕೊಂಡಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಪಶ್ಚಿಮಕ್ಕೆ ತಾರೆಮರದ ರಸ್ತೆ ಇರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸರ್ವೆ ನಂ.258/ಪಿ 1 ರಲ್ಲಿ , 3 ಎಕರೆ 10 ಗುಂಟೆ ಜಮೀನು ಸರ್ಕಾರಿ ಶಾಲೆ ಮತ್ತು ರಸ್ತೆಗಳಿಗೆ ಹಾಗೂ ಗ್ರಾಮ ಠಾಣಾಕ್ಕೆ ಹೋಗಿದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.248/ಪಿ 1 ರಲ್ಲಿ, 20 ಗುಂಟೆ ಜಮೀನು ಹಳ್ಳಕ್ಕೆ ಹೋಗಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನ್ಯಾಯಾಲಯದಲ್ಲಿ ಹಾಜರುಪಡಿಸಿರುವ ದಾಖಲೆಗಳನ್ನು ನನ್ನ ತಾಯಿಯೇ ಸಂಬಂಧಪಟ್ಟ ಕಚೇರಿಯಿಂದ ಪಡೆದುಕೊಂಡಿರುತ್ತಾರೆ. ನಾನು ಹಾಜರುಪಡಿಸಿರುವ ಎಲ್ಲಾ ದಾಖಲೆಗಳಲ್ಲಿ ಅರ್ಜಿದಾರರ ಹೆಸರು ಸಾಕಮ್ಮ ಎಂದು ನಮೂದಾಗಿದೆ.

ಸರ್ವೆ ನಂ.258 ರಲ್ಲಿ ಒಟ್ಟು ಎಷ್ಟು ಎಕರೆ ಜಮೀನು ಇದೆ ಎಂಬುದು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಗೆ ದಾವಾ ಸ್ವತ್ತುಗಳು ಭೂ ನ್ಯಾಯ ಮಂಡಳಿಯಿಂದ ಮಂಜೂರಾಗಿರುವ ವಿಚಾರ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯು ದಾವಾ ಸ್ವತ್ತುಗಳಲ್ಲಿ ಸ್ವಾಧೀನಾನುಭವದಲ್ಲಿ ಇದ್ದುದರಿಂದ ಅವರ ಹೆಸರಿನಲ್ಲಿ ದಾವಾ ಸ್ವತ್ತುಗಳು ಮಂಜೂರಾಗಿರುತ್ತವೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ಪ್ರಿಮಿಯಂ ಹಣ ಮತ್ತು

ದಂಡವನ್ನು  ಪಾವತಿ ಮಾಡುವಂತೆ ದಿಃ 03-11-1996 ರಂದು  ನೋಟೀಸ್ ಬಂದಿದ್ದ ವಿಚಾರ ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳು ಪ್ರತಿವಾದಿಗೆ ಎಲ್ ಆರ್ ಎಫ್ ನಂ 65/75-76 ರಡಿ ಮಂಜೂರಾಗಿತ್ತು ಎಂದರೆ ಸರಿಯಲ್ಲ. ಸದರಿ ಹಣವನ್ನು 1 ನೇ ಪ್ರತಿವಾದಿಯು ಪಾವತಿ ಮಾಡಿದ್ದುದರಿಂದ ದಾವಾ ಸ್ವತ್ತುಗಳ ಮೇಲೆ ಅವರನ್ನು ಹೊರತುಪಡಿಸಿ ಇತರೆಯವರಿಗೆ ಯಾವುದೇ ರೀತಿಯ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರಿಮಿಯಂ ಹಣ ಮತ್ತು ದಂಡ ಹಣವನ್ನು 1 ನೇ ಪ್ರತಿವಾದಿಯು ತನ್ನ ಸ್ವಂತ ದುಡಿಮೆಯ ಹಣದಿಂದ ಪಾವತಿ ಮಾಡಿದ್ದರಿಂದ ಆ ಸ್ವತ್ತು ಅವರ ಸ್ವಯಾರ್ಜಿತ ಸ್ವತ್ತು ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**ಸಾ. ಹೇ. ತೆ. ನ್ಯಾ ಬೆ. ಮಾಡಿಸಲಾಯಿತು.**

**ಓ. ಹೇ. ಕೇ. ಸ. ಇದೆ.**

**ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಹೊನ್ನಾಳಿ.**